-66-

# ಕರ್ನಾಟಕ ಸರ್ಕಾರ
## ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

E-Mail Id: adpiqsection@gmail.com Phone No: 080-23460525

ಸಂಖ್ಯೆ: ಕ್ಯೂ3/ಡಿಪಿಎಸ್ಇ/ಮು.ಪ/ಜೂನ್-23/01/2023-24 ದಿನಾಂಕ: 10.10.2023

**ಸುತ್ತೋಲೆ**

**ವಿಷಯ:-** 2022-23 ನೇ ಸಾಲಿನಲ್ಲಿ ಡಿಪ್ಲೋಮಾ ಇನ್ ಪ್ರಿ-ಸ್ಕೂಲ್ ಎಜುಕೇಷನ್(ಡಿ.ಪಿ.ಎಸ್.ಇ) ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಡಿಜಿಟಲ್ ಅಂಕಪಟ್ಟಿಗಳನ್ನು ಆನ್‌ಲೈನ್ ಮೂಲಕ ವಿತರಿಸುವ ಬಗ್ಗೆ.

**ಉಲ್ಲೇಖ:-** ಸರ್ಕಾರಿ ಆದೇಶ ಸಂಖ್ಯೆ:ಇಡಿ 80 ಮಾಹಿತಿ 2021,ಬೆಂಗಳೂರು, ದಿನಾಂಕ:05.07.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2022-23ನೇ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ಡಿಪ್ಲೋಮಾ ಇನ್ ಪ್ರಿ-ಸ್ಕೂಲ್ಎಜುಕೇಷನ್(ಡಿ.ಪಿ.ಎಸ್.ಇ) ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳಿಗೆ ಆನ್‌ಲೈನ್ ಮೂಲಕ DIGITALLY SIGNED ಅಂಕಪಟ್ಟಿಯನ್ನು ವಿತರಿಸಲು ಉಲ್ಲೇಖದ ಸರ್ಕಾರಿ ಪತ್ರದಲ್ಲಿ ಆದೇಶಿಸಿದೆ.

**ಆನ್‌ಲೈನ್ ಮೂಲಕ ಅಭ್ಯರ್ಥಿಗಳು ಅಂಕಪಟ್ಟಿಯನ್ನು ಪಡೆಯುವ ಮಾರ್ಗಸೂಚಿ ವಿಧಾನ**

- ಪ್ರಥಮ ಮತ್ತು ದ್ವಿತೀಯ ವರ್ಷದ ಡಿ.ಪಿ.ಎಸ್.ಇ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳು DIGITALLY SIGNED ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಸಂಬಂಧ ಅಭ್ಯರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಮಾಹಿತಿ ರವಾನಿಸಲಾಗುವುದು.
- ಈ ಎಸ್‌ಎಂಎಸ್ ನಲ್ಲಿ ಅಭ್ಯರ್ಥಿಗಳು ಅಂಕಪಟ್ಟಿಯನ್ನು ಡೌನ್‌ಲೊಡ್ ಮಾಡಿಕೊಳ್ಳಲು ಲಿಂಕನ್ನು ನೀಡಲಾಗುವುದು. ಒಂದು ವೇಳೆ ರಿಜಿಸ್ಟರ್ಡ್ ಮೊಬೈಲ್ ಸಂಖ್ಯೆ ಲಭ್ಯವಿಲ್ಲದಿದ್ದಲ್ಲಿ ಸಂಸ್ಥೆಯ ಮುಖ್ಯಸ್ಥರ ಮೂಲಕ ಮನವಿ ಪತ್ರದೊಂದಿಗೆ ಮಂಡಳಿಗೆ ಮಾಹಿತಿ ನೀಡಿ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಂಡು ನೊಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
- ಲಿಂಕ್‌ಅನ್ನು ಕ್ಲಿಕ್ ಮಾಡಿದಾಗ ಅಭ್ಯರ್ಥಿಗಳಿಗೆ Front end screen ಪ್ರದರ್ಶಿತವಾಗುತ್ತದೆ.
- Front end screen ನಲ್ಲಿ ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆ, ತಮ್ಮ ಹೆಸರಿನ ಪ್ರಾರಂಭಿಕ ಮೂರು ಅಕ್ಷರಗಳು (English Capital Letters) ಹಾಗೂ ಜನ್ಮ ದಿನಾಂಕ (DD/MM/YYYY) ವನ್ನು ಅಭ್ಯರ್ಥಿಯ ಪ್ರವೇಶ ಪತ್ರದಲ್ಲಿರುವಂತೆ ನಮೂದಿಸಿ ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.
- ಅಭ್ಯರ್ಥಿಯು ಅಂಕಪಟ್ಟಿಯನ್ನು ಆನ್‌ಲೈನ್ ಮೂಲಕ ಪಡೆಯಲು ಅಂಕಪಟ್ಟಿ ಪ್ರಕಟಿಸಿದ 1 ತಿಂಗಳ ಒಳಗೆ ಪಡೆಯಲು ಕಾಲಾವಕಾಶವನ್ನು ಕಲ್ಪಿಸಲಾಗುತ್ತದೆ. ತದನಂತರ ಲಿಂಕ್‌ಅನ್ನು ನಿಷ್ಕ್ರಿಯಗೊಳಿಸಲಾಗುವುದು.

Scanned with OKEN Scanner

ಒಂದು ತಿಂಗಳ ನಂತರ ಅಭ್ಯರ್ಥಿಗಳಿಗೆ ಮತ್ತೊಮ್ಮೆ ಅಂಕಪಟ್ಟಿ /ಉತ್ತೀರ್ಣ ಪ್ರಮಾಣಪತ್ರ(Passing Certificate) ಪಡೆಯುವ ಅವಶ್ಯಕತೆ ಉಂಟಾದಲ್ಲಿ ದ್ವಿತೀಯ, ಪ್ರತಿಗೆ ಒಂದು ಅಂಕಪಟ್ಟಿಗೆ ಶುಲ್ಕ ರೂ.875/-(ತುರ್ತು ಸೇವೆ ಬಯಸಿದಲ್ಲಿ ಶುಲ್ಕ ರೂ.1750/-) NEFT ಚಲನ್ ನಲ್ಲಿ ಜಮಾ ಮಾಡಿ ಮಂಡಳಿಯನ್ನು ಸಂಪರ್ಕಿಸಿ ನಿಯಮಾನುಸಾರ ಅಂಕಪಟ್ಟಿಯ ಪ್ರತಿಯನ್ನು ಪಡೆಯಬಹುದು.

- ಡೌನ್‌ಲೋಡ್ ಮಾಡಿಕೊಂಡ ಅಂಕಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು, ತಂದೆ, ತಾಯಿಯ ಹೆಸರು ತಿದ್ದುಪಡಿ ಆಗ ಬೇಕಾದಲ್ಲಿ ಅಗತ್ಯ ದಾಖಲೆಗಳೊಂದಿಗೆ ಅಂಕಪಟ್ಟಿ ಪಡೆದ 15 ದಿನಗಳೊಳಗಾಗಿ ಪ್ರಸ್ತಾವನೆಯನ್ನು ಸಂಸ್ಥೆಯ ಮುಖ್ಯಸ್ಥರು ಡಯಟ್ ಪ್ರಾಂಶುಪಾಲರ ಮುಖಾಂತರ ಸಲ್ಲಿಸಬಹುದು.
- ಉತ್ತೀರ್ಣ ಪ್ರಮಾಣ ಪತ್ರವನ್ನು (Passing Certificate) ಪ್ರಥಮ ಮತ್ತು ದ್ವಿತೀಯ ಡಿ.ಪಿ.ಎಸ್.ಇ ಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳು ಹಾಗೂ ಗಳಿಸಿದ ಶ್ರೇಣಿಯನ್ನೊಳಗೊಂಡು ಭೌತಿಕ ಪ್ರತಿಯನ್ನು ನೇರವಾಗಿ ಮಂಡಳಿಯಿಂದ ಸಂಬಂಧಪಟ್ಟ ಸಂಸ್ಥೆಗಳಿಗೆ ಕಳುಹಿಸಲಾಗುವುದು.
- ಉತ್ತೀರ್ಣ ಅಭ್ಯರ್ಥಿಗಳು ಉತ್ತೀರ್ಣ ಪ್ರಮಾಣ ಪತ್ರವನ್ನು(Passing Certificate) ಮಂಡಳಿಯಿಂದ ಕಡ್ಡಾಯವಾಗಿ ಪಡೆದುಕೊಳ್ಳವುದು. ಉತ್ತೀರ್ಣ ಪ್ರಮಾಣ ಪತ್ರವನ್ನು ಪಡೆಯದೆ ಇದ್ದಲ್ಲಿ ಪ್ರಥಮ ಮತ್ತು ದ್ವಿತೀಯ ಅಂಕಪಟ್ಟಿಗಳು ಊರ್ಜಿತವಾಗುವುದಿಲ್ಲ.

11/10/2023

(ಹೆಚ್.ಎನ್.ಗೋಪಾಲಕೃಷ್ಣ)
ನಿರ್ದೇಶಕರು(ಪರೀಕ್ಷೆಗಳು)

ಪ್ರತಿಯನ್ನು:

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಅಗತ್ಯ ಮಾಹಿತಿಗಾಗಿ.
3. ಪ್ರಾಂಶುಪಾಲರು ಟಿಟಿಐ ಕಾಲೇಜು, ಹೊಸದುರ್ಗ/ GTW ಕಲಬುರಗಿ ರವರ, ಅಭ್ಯರ್ಥಿಗಳಿಗೆ ಆನ್‌ಲೈನ್ ಅಂಕಪಟ್ಟಿ ಪಡೆಯುವಲ್ಲಿ ಸೂಕ್ತ ಮಾರ್ಗದರ್ಶನ ಹಾಗೂ ತಿಳುವಳಿಕೆ ನೀಡುವುದು.
4. ಕಛೇರಿ ಪ್ರತಿ.

Scanned with OKEN Scanner